# ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

# ಕರ್ನಾಟಕ ಸರ್ಕಾರ

# ಮತ್ತು

# ಕರ್ನಾಟಕ ರಾಜ್ಯ ವಿಜ್ಞಾನ ಹಾಗೂ ತಂತ್ರವಿದ್ಯಾ ಮಂಡಳಿ

## ಪತ್ರಿಕಾ ಪ್ರಕಟಣೆ

### ಸರ್ ಎಂ. ವಿಶ್ವೇಶ್ವರಯ್ಯ, ಡಾ। ರಾಜಾ ರಾಮಣ್ಣ, ಸರ್ ಸಿ. ವಿ. ರಾಮನ್, ಪ್ರೊ। ಸತೀಶ್ ಧವನ್ ಮತ್ತು ಡಾ। ಕಲ್ಪನಾ ಚಾವ್ಲಾ ವಿಜ್ಞಾನಿ ಮತ್ತು ಇಂಜಿನಿಯರ್ ರಾಜ್ಯ ಪ್ರಶಸ್ತಿಗಳು – 2017

ಕರ್ನಾಟಕ ಸರ್ಕಾರದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ರಾಜ್ಯದ ವಿಜ್ಞಾನಿ ಮತ್ತು ಇಂಜಿನಿಯರ್‌ಗಳನ್ನು **ಪ್ರೋ**ತ್ಸಾಹಿಸಲು ಪ್ರತಿವರ್ಷ ಹಲವು ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತಿದೆ. ಈ ಪ್ರಶಸ್ತಿಗಳನ್ನು ಹೆಸರಾಂತ ವಿಜ್ಞಾನಿಗಳಾದ ಸರ್ ಎಂ. ವಿಶ್ವೇಶ್ವರಯ್ಯ, ಡಾ. ರಾಜಾ ರಾಮಣ್ಣ, ಸರ್ ಸಿ. ವಿ. ರಾಮನ್, **ಪ್ರೊ**. ಸತೀಶ್ ಧವನ್ ಮತ್ತು ಡಾ. ಕಲ್ಪನಾ ಚಾವ್ಲಾ ಅವರ ಹೆಸರಿನಲ್ಲಿ ನೀಡಿ ಗೌರವಿಸುತ್ತಿದೆ.

ಸರ್ಕಾರವು ಈ ಪ್ರಶಸ್ತಿಗಳಿಗೆ ಅರ್ಹ ವಿಜ್ಞಾನಿ ಮತ್ತು ಇಂಜಿನಿಯರುಗಳ ಆಯ್ಕೆಗಾಗಿ ಭಾರತ ರತ್ನ ಪ್ರೊ. ಸಿ. ಎನ್. ಆರ್. ರಾವ್ ಅಧ್ಯಕ್ಷತೆಯಲ್ಲಿ, ಹೆಸರಾಂತ ವಿಜ್ಞಾನಿಗಳನ್ನೊಳಗೊಂಡ ಉನ್ನತ ಸಮಿತಿಯನ್ನು ರಚಿಸಿದ್ದು, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿಗೆ (**KSCST**) ಪ್ರಶಸ್ತಿಗೆ ಅರ್ಹ ಅಭ್ಯರ್ಥಿಗಳ ಆಯ್ಕೆ ಮತ್ತು ಪ್ರಶಸ್ತಿ ಪ್ರಧಾನ ಸಮಾರಂಭದ ನಿರ್ವಹಣಾ ಜವಾಬ್ದಾರಿಯನ್ನು ವಹಿಸಿರುತ್ತದೆ.

**ಸರ್ ಎಂ.ವಿಶ್ವೇಶ್ವರಯ್ಯ ಹಿರಿಯ ವಿಜ್ಞಾನಿ ರಾಜ್ಯ ಪ್ರಶಸ್ತಿ:** ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯದ ಅಭಿವೃದ್ಧಿಗಾಗಿ ತಮ್ಮ ಜೀವನಾವಧಿಯಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಇಬ್ಬರು ಹಿರಿಯ ವಿಜ್ಞಾನಿ/ ಇಂಜಿಯರ್ ಗಳಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಈ ಪ್ರಶಸ್ತಿಯು ರೂ. 2,00,000 ನಗದು, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

**ಡಾ। ರಾಜಾ ರಾಮಣ್ಣ ವಿಜ್ಞಾನಿ ರಾಜ್ಯ ಪ್ರಶಸ್ತಿ:** ರಾಜ್ಯದಲ್ಲಿ ವಿಜ್ಞಾನ ಶಿಕ್ಷಣ / ವಿಜ್ಞಾನದ ಇತಿಹಾಸ ಮತ್ತು ತತ್ವಜ್ಞಾನ / ವಿಜ್ಞಾನ ಮತ್ತು ಸಮಾಜ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಇಬ್ಬರು ಹಿರಿಯ ವಿಜ್ಞಾನಿ/ ಇಂಜಿಯರ್ ಗಳಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಈ ಪ್ರಶಸ್ತಿಯು ರೂ. 1,50,000 ನಗದು, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

**ಸರ್ ಸಿ. ವಿ. ರಾಮನ್ ಯುವ ವಿಜ್ಞಾನಿ ರಾಜ್ಯ ಪ್ರಶಸ್ತಿ:** ಈ ಪ್ರಶಸ್ತಿಗಳನ್ನು ರಾಜ್ಯದ ಯುವ ವಿಜ್ಞಾನಿಗಳನ್ನು ಪ್ರೋತ್ಸಾಹಿಸಲು ಅವರ ವಿಶಿಷ್ಟ ಕಾರ್ಯಸಾಧನೆಯನ್ನು ಪರಿಗಣಿಸಿ, ಈ ಕೆಳಕಂಡ ಐದು ಕ್ಷೇತ್ರಗಳಲ್ಲಿ ಪ್ರತಿವರ್ಷ ಈ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ.

- ಜೀವ ವಿಜ್ಞಾನ
- ಭೌತ ವಿಜ್ಞಾನ ಮತ್ತು ಗಣಿತಶಾಸ್ತ್ರ

- ರಾಸಾಯನ ವಿಜ್ಞಾನ
- ಕೃಷಿ ವಿಜ್ಞಾನ ಮತ್ತು ಪಶುಸಂಗೋಪನೆ
- ವೈದ್ಯಕೀಯ ವಿಜ್ಞಾನ

**ಪ್ರೊ। ಸತೀಶ್ ಧವನ್ ಯುವ ಇಂಜಿನಿಯರ್ ರಾಜ್ಯ ಪ್ರಶಸ್ತಿ:** ಈ ಪ್ರಶಸ್ತಿಗಳನ್ನು ರಾಜ್ಯದ ಯುವ ಇಂಜಿನಿಯರುಗಳನ್ನು ಪ್ರೋತ್ಸಾಹಿಸಲು ಅವರ ವಿಶಿಷ್ಟ ಕಾರ್ಯಸಾಧನೆಯನ್ನು ಪರಿಗಣಿಸಿ ಇಂಜನಿಯರಿಂಗ್ ವಿಜ್ಞಾನ ಕ್ಷೇತ್ರಗಳಲ್ಲಿ ಪ್ರತಿವರ್ಷ ಈ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ.

**ಡಾ. ಕಲ್ಪನಾ ಚಾವ್ಲಾ ಮಹಿಳಾ ಯುವ ವಿಜ್ಞಾನಿ ಪ್ರಶಸ್ತಿ:** ಈ ಪ್ರಶಸ್ತಿಗಳನ್ನು ರಾಜ್ಯದ ಯುವ ಮಹಿಳಾ ವಿಜ್ಞಾನಿ/ ಇಂಜಿನಿಯರ್‌ಗಳನ್ನು ಪ್ರೋತ್ಸಾಹಿಸಲು ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ಅವರ ವಿಶಿಷ್ಟ ಕಾರ್ಯಸಾಧನೆಯನ್ನು ಪರಿಗಣಿಸಿ, ಪ್ರತಿವರ್ಷ ಒಬ್ಬ ಮಹಿಳಾ ಯುವ ವಿಜ್ಞಾನಿ / ಇಂಜಿನಿಯರ್‌ಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ.

ಸರ್ ಸಿ. ವಿ. ರಾಮನ್, ಪ್ರೊ. ಸತೀಶ್ ಧವನ್ ಮತ್ತು ಡಾ. ಕಲ್ಪನಾ ಚಾವ್ಲಾ ಪ್ರಶಸ್ತಿಗಳು ರೂ.1,00,000 ನಗದು, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತವೆ.

2017 ನೇ ವರ್ಷದ ಪ್ರಶಸ್ತಿಗಳಿಗೆ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿಯು ಜುಲೈ/ಆಗಸ್ಟ್ 2017 ರಲ್ಲಿ ನಾಮಪತ್ರಗಳನ್ನು ಆಹ್ವಾನಿಸಿದ್ದು 178 ನಾಮಪತ್ರಗಳನ್ನು ಸ್ವಿಕರಿಸಲಾಗಿತ್ತು. ಭಾರತ ರತ್ನ ಪ್ರೊ. ಸಿ. ಎನ್. ಆರ್. ರಾವ್ ಅವರ ಅಧ್ಯಕ್ಷತೆಯಲ್ಲಿ, ಹೆಸರಾಂತ ವಿಜ್ಞಾನಿಗಳನ್ನೊಳಗೊಂಡ ಉನ್ನತ ಸಮಿತಿಯು ಆಯ್ಕೆ ಮಾಡಿದ ಆಯ್ಕೆಪಟ್ಟಿಗೆ ಸರ್ಕಾರವು ಅನುಮೋದನೆ ನೀಡಿದ್ದು 2017 ನೇ ವರ್ಷದ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ದಿನಾಂಕ 06.08.2018 ಸೋಮವಾರ ರಂದು ಸಂಜೆ 04.00 ಗಂಟೆಗೆ ಇಂಡಿಯನ್ ಇನ್ಸಿಟಟ್ಯೂಟ್ ಆಫ್ ಸೈನ್ಸ್ನ ಜೆ. ಎನ್. ಟಾಟಾ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕೆ.ಎಸ್.ಸಿ.ಎಸ್.ಟಿ.ಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಅವರು ಪ್ರಶಸ್ತಿ ಪ್ರಧಾನ ಮಾಡಲಿದ್ದಾರೆ. ರಾಜ್ಯದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ, ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಚಿವರಾದ ಸನ್ಮಾನ್ಯ ಶ್ರೀ. ಕೆ.ಜೆ.ಜಾರ್ಜ್ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಲಿನಸ್ ಪೌಲಿಂಗ್ ರಿಸರ್ಚ್ ಸಂಶೋಧನಾ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ವಿಜ್ಞಾನ ಮತ್ತು ದಾರ್ಶನಿಕ ಸಮೂಹ, ಕರ್ನಾಟಕ ಸರ್ಕಾರ, ಭಾರತ ರತ್ನ ಪ್ರೊ ಸಿ. ಎನ್. ಆರ್. ರಾವ್, FRS ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲ್ಲಿದ್ದಾರೆ. ಪ್ರೊ. ಅನುರಾಗ್ ಕುಮಾರ್, ನಿರ್ದೇಶಕರು, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಹಾಗೂ ಛೇರಮನ್, ಕಾರ್ಯಕಾರಿ ಸಮಿತಿ, ಕೆ.ಎಸ್.ಸಿ.ಎಸ್.ಟಿ., ಇವರು ಗೌರವಾನ್ವಿತ ಅತಿಥಿಗಳಾಗಿರುತ್ತಾರೆ.

(ಹೆಚ್ಚಿನ ವಿವರಗಳನ್ನು ವೆಬ್‌ಸೈಟ್‌ನಲ್ಲಿ www.kscst.org.in ಮತ್ತು www.kscst.iisc.ernet.in ಪಡೆಯಬಹುದು)

## 2017 ನೇ ವರ್ಷದ ವಿಜ್ಞಾನಿ ಮತ್ತು ಇಂಜಿನಿಯರ್ ರಾಜ್ಯ ಪ್ರಶಸ್ತಿ ವಿಜೇತರ ಪಟ್ಟಿ

### ಸರ್ ಎಂ. ವಿಶ್ವೇಶ್ವರಯ್ಯ ಹಿರಿಯ ವಿಜ್ಞಾನಿ ಪ್ರಶಸ್ತಿ

| ಪ್ರಶಸ್ತಿ ವಿಜೇತರ ಹೆಸರು ಮತ್ತು ವಿಳಾಸ | ಕ್ಷೇತ್ರ | |
|---|---|---|
| ಪ್ರೊ. ಬಿ.ಜಿ.ಮುಲಿಮನಿ<br>ಅಧ್ಯಕ್ಷರು,<br>ಡಾ. ಎಂ.ಐ. ಸವದತ್ತಿ ವಿದ್ಯಾವರ್ಧಕ ಸಂಸ್ಥೆ.<br>"ಚಂದ್ರ" ನಂ.154, ರಾಣಿ ಚೆನ್ನಮ್ಮನಗರ,<br>ಧಾರಾವಾಡ-580001 | ವಿಜ್ಞಾನ ಮತ್ತು ತಂತ್ರಜ್ಞಾನ |  |
| ಡಾ.ಎಸ್.ಅಯ್ಯಪ್ಪನ್<br>ಮಾಜಿ ಕಾರ್ಯದರ್ಶಿ,<br>ಕೃಷಿ ಸಂಶೋಧನೆ ಮತ್ತು ಶಿಕ್ಷಣ ವಿಭಾಗ,<br>ಡೈರೆಕ್ಟರ್ ಜನರಲ್, ICAR ನಾರ್ಬಾಡ್ ಚೇರ್ ಪ್ರೊಫೆಸರ್<br>ಮತ್ತು ಅಡ್ಜಂಕ್ಟ್ ಪ್ರೊಫೆಸರ್,<br>ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್,<br>ಐ.ಐ.ಎಸ್ಸಿ<br>ಬೆಂಗಳೂರು-560012 | ವಿಜ್ಞಾನ ಮತ್ತು ತಂತ್ರಜ್ಞಾನ |  |

### ಡಾ। ರಾಜಾ ರಾಮಣ್ಣ ಹಿರಿಯ ವಿಜ್ಞಾನಿ ಪ್ರಶಸ್ತಿ

| | | |
|---|---|---|
| ಡಾ. ಜಿ. ಗುರುರಾಜ<br>ಸೀನಿಯರ್ ಪ್ರೊಫೆಸರ್ ಮತ್ತು ಡೀನ್ ಆಫ್ ನ್ಯೂರೋ ಸೈನ್ಸ್<br>ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಅಂಡ್ ನ್ಯೂರೋ ಸೈನ್ಸ್ (ನಿಮ್ಹಾನ್ಸ್)<br>ಬೆಂಗಳೂರು – 560 029. | ವಿಜ್ಞಾನ ಶಿಕ್ಷಣ |  |
| ಪ್ರೊ.ಎಚ್.ಎ.ರಂಗನಾಥ<br>ಮಾಜಿ ನಿರ್ದೇಶಕರು, ನ್ಯಾಕ್ (ಎನ್.ಎ.ಎ.ಸಿ) ಮತ್ತು<br>ವಿಶ್ರಾಂತ ಉಪಕುಲಪತಿ, ಬೆಂಗಳೂರು ವಿಶ್ವವಿದ್ಯಾಲಯ.<br>ಗೌರವನ್ವಿತ ಪ್ರೊಫೆಸರ್, ಮೈಸೂರು ವಿಶ್ವವಿದ್ಯಾನಿಲಯ,<br>ಬಯೋಲಾಜಿಕಲ್ ಸೈನ್ಸ್ ವಿಭಾಗ,<br>ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು-500612 | ವಿಜ್ಞಾನ ಶಿಕ್ಷಣ |  |

# ಸರ್ ಸಿ. ವಿ. ರಾಮನ್ ಯುವ ವಿಜ್ಞಾನಿ ರಾಜ್ಯ ಪ್ರಶಸ್ತಿ

| | | |
|---|---|---|
| ಡಾ. ಕರುಣಾಕರ. ಎನ್<br>ಪ್ರೊಫೆಸರ್ ಮತ್ತು ಕೋ-ಆರ್ಡಿನೇಟರ್<br>ಸೆಂಟ್ರಲ್ ಫಾರ್ ಅಡ್ವಾನ್ಸಡ್ ರಿಸರ್ಚ್ ಇನ್ ಎನ್ವಿರಾನ್ಮೆಂಟಲ್<br>ರೇಡಿಯೊ ಆಕ್ಟಿವಿಟಿ (CARER),<br>ಮಂಗಳೂರು ವಿಶ್ವವಿದ್ಯಾಲಯ,<br>ಮಂಗಳೂರು- 574199 | ಭೌತ ವಿಜ್ಞಾನ |  |
| ಡಾ. ಅರುಣ್ ಮೋಹನ್ ಇಸ್ಲೂರ್,<br>ಅಸೋಸಿಯೆಟ್ ಪ್ರೊಫೆಸರ್, ರಸಾಯನಶಾಸ್ತ್ರ ವಿಭಾಗ,<br>ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ-ಕರ್ನಾಟಕ,<br>ಸುರತ್ಕಲ್, ಮಂಗಳೂರು-575 025 | ರಾಸಾಯನ ವಿಜ್ಞಾನ |  |
| ಡಾ ಜಗದೀಶ ತೀರ್ಥಳ್ಳಿ,<br>ಪ್ರೊಫೆಸರ್, ಸೈಕಿಯಾಟ್ರಿ ಇಲಾಖೆ,<br>ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ &<br>ನ್ಯೂರೊ ಸೈನ್ಸ್ (ನಿಮ್ಯಾನ್ಸ್), ಬೆಂಗಳೂರು –560029 | ವೈದ್ಯಕೀಯ ವಿಜ್ಞಾನ |  |
| ಡಾ. ಪ್ಯಾಟ್ರಿಕ್ ಡಿ 'ಸಿಲ್ವಾ,<br>ಅಸೋಸಿಯೆಟ್ ಪ್ರೊಫೆಸರ್, ಬಯೋಕೆಮಿಸ್ಟ್ರಿ ಇಲಾಖೆ,<br>ಬಯೋಲಾಜಿಕಲ್ ಸೈನ್ಸ್ ವಿಭಾಗ,<br>ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು –<br>560012 | ಜೀವ ವಿಜ್ಞಾನ |  |
| ಡಾ. ನಟರಾಜ ಕರಾಬಾ ಎನ್,<br>ಪ್ರೊಫೆಸರ್, ಕ್ರಾಪ್ ಫಿಸಿಯಾಲಜಿ ಇಲಾಖೆ,<br>ಕೃಷಿ ವಿಜ್ಞಾನ ವಿಶ್ವವಿದ್ಯಾಲಯ,<br>ಜಿಕೆವಿಕೆ, ಬೆಂಗಳೂರು – 560065 | ಕೃಷಿ ವಿಜ್ಞಾನ ಮತ್ತು ಪಶುಸಂಗೋಪನೆ |  |

## ಪ್ರೊ। ಸತೀಶ್ ಧವನ್ ಯುವ ಇಂಜಿನಿಯರ್ ರಾಜ್ಯ ಪ್ರಶಸ್ತಿ

| | | |
|---|---|---|
| ಡಾ. ಪ್ರವೀಣ್ ಸಿ ರಾಮಮೂರ್ತಿ<br>ಅಸೋಸಿಯೆಟ್ ಪ್ರೊಫೆಸರ್,<br>ಮೆಟೀರಿಯಲ್ಸ್ ಇಂಜಿನಿಯರಿಂಗ್ ವಿಭಾಗ,<br>ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್,<br>ಬೆಂಗಳೂರು – 560012 | ಇಂಜಿನಿಯರಿಂಗ್ ವಿಜ್ಞಾನ |  |
| ಡಾ. ಕೆ. ವಿದ್ಯಾ ಶೆಟ್ಟಿ<br>ಅಸೋಸಿಯೇಟ್ ಪ್ರೊಫೆಸರ್, ಕೆಮಿಕಲ್ ಇಂಜಿನಿಯರಿಂಗ್ ವಿಭಾಗ,<br>ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ-ಕರ್ನಾಟಕ,<br>ಸುರತ್ಕಲ್, ಮಂಗಳೂರು – 575025 | ಇಂಜಿನಿಯರಿಂಗ್ ವಿಜ್ಞಾನ |  |
| ಡಾ. ಚಂದ್ರ ಆರ್. ಮೂರ್ತಿ,<br>ಅಸೋಸಿಯೆಟ್ ಪ್ರೊಫೆಸರ್,<br>ಎಲೆಕ್ಟ್ರಿಕಲ್ ಕಮ್ಯುನಿಕೇಷನ್ ಎಂಜಿನಿಯರಿಂಗ್ ವಿಭಾಗ,<br>ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್,<br>ಬೆಂಗಳೂರು – 560012. | ಇಂಜಿನಿಯರಿಂಗ್ ವಿಜ್ಞಾನ |  |

## ಡಾ. ಕಲ್ಪನಾ ಚಾವ್ಲಾ ಮಹಿಳಾ ಯುವ ವಿಜ್ಞಾನಿ ಪ್ರಶಸ್ತಿ

| | | |
|---|---|---|
| ಪ್ರೊ. ಮನೀಶ ಎಸ್ ಇನಾಮ್ದರ್,<br>ಪ್ರೊಫೆಸರ್ ಮತ್ತು ಡೀನ್,<br>ಜವಾಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ್<br>ಸೈಂಟಿಫಿಕ್ ರಿಸರ್ಚ್, ಜಕ್ಕೂರ್,<br>ಬೆಂಗಳೂರು – 560064. | ವಿಜ್ಞಾನ ಮತ್ತು ತಂತ್ರಜ್ಞಾನ |  |